'ಮಿಸ್ಟರ್ ಅಕ್ಷಯಕುಮಾರ್, ಏನ್ರೀ ನೀವು ಮಾಡ್ತಿರೋದು? ನೀವು ಆ ಮಗುವಿಗೆ ಅಪ್ಪ ಆದ ಮಾತ್ರಕ್ಕೆ ಆ ಮಗುವಿನ 'ಲೋಕ'ವನ್ನು ನೀವೂ ಕಿತ್ತುಕೊಳ್ಳುದಕ್ಕೆ ಆಗುತ್ತಾ?!... ಪ್ರತಿ ಮಗುವಿಗೂ ಅದ್ರದ್ದೇ ಆದ ಒಂದು ಲೋಕ ಇದೆ ಅನ್ನೋದು ನಿಮ್ಗೆ ಗೊತ್ತಿಲ್ಲ ಅಂತಾ ಕಾಣ್ಸುತ್ತೆ. ನಿಮ್ಗೂ ಒಂದು 'ಲೋಕ' ಅಂತ ಇದೆ ಅಲ್ವಾ... ಹಾಗೆನೆ ಆ ಮಗುವಿಗೂ ಅದ್ರ ಲೋಕನಾ ಹುಡುಕೋದಕ್ಕೆ... ಅದ್ರೊಳಗೆ ಬದುಕೋದಕ್ಕೆ ಅವಕಾಶ ಮಾಡಿಕೊಡ್ಬೇಕು... ನೀವು. ಈ ಮಗುವಿಗೆ ಮೊದ್ಲು ತಂದೆ ಆಗ್ಬೇಕಾಗಿರೋದು ನೀವು ಈ ಕಾರಣಕ್ಕೆ...'

ವಾಹೀದ್ ಡಾಕ್ಟ್ರು, ಗಂಡನ ಅಂತರಂಗದಲ್ಲಿ ಪಾಚಿಗಟ್ಟಿ ಕೂತಿದ್ದ ಹಳಸಲು ಚಿಂತನೆ ಭಾವನೆಗಳನ್ನೆಲ್ಲ ಪಾತಾಳಗರಡಿ ಹಾಕಿ ಜಾಲಾಡಿಸಿ, ಅದುಮಿ... ಹೊರತೆಗೆದು ಎಸೆಯುತ್ತಿರುವುದನ್ನು ಕಂಡು, ಎಳೆ ಬಸುರಿ ಕುಮುದ ಅತೀವ ಸಂತಸದಿಂದ ಸೋರೆಯ ಮೊಗ್ಗು ಬಿರಿದಂತೆ ಅರೆಬಿರಿದ ತುಟಿಯಲ್ಲಿ ನಗು ಜಿನುಗಿಸುತ್ತ, ಡಾ. ವಾಹೀದ್ ಅವರನ್ನು ಅಭಿಮಾನದಿಂದ ದಿಟ್ಟಿಸುತ್ತಿರಬೇಕಾದರೆ, ವೈದ್ಯರಿಗೆ ಆಕೆಯ ಆರಾಧನಾ ದಿಟ್ಟಿಯನ್ನು ಕಂಡು ಒಂದು ಕ್ಷಣ ನೆನಪಿನ ಮಿಂಚು ಹೊಡೆದಂತಾಯ್ತು! ಅವರ ಚಿತ್ರದಲ್ಲಿ ಅವರಿಷ್ಟದ ಡಾ. ಸ್ವಪ್ನ ಹೆಗ್ಡೆಯ ನಗುಮುಖ, ಹಾಗೇ ಸುಳಿದು ಬಂದು... ಹೀಗೇ ಹಾರಿಹೋಗಿತ್ತು! ಒಂದರೆ ಕ್ಷಣ ಅವರು ತನ್ನ ಸ್ವಪ್ನಿಯ ನೆನಪಲ್ಲಿ ತೇಲಾಡಿಬಿಟ್ಟಿದ್ದರು...

ಮೈಸೂರಿನ ಖ್ಯಾತ ಸೈಕಿಯಾಟ್ರಿಸ್ಟ್ ಡಾ. ವಾಹೀದ್ ಮತ್ತು ಡಾ. ಸ್ವಪ್ನ ಹೆಗ್ಡೆ ಇಬ್ಬರೂ ತುಳುವ ಮಣ್ಣಿನವರೇ. ವಾಹೀದ್ ಅವರು ತುಳುನಾಡಿನ ಖ್ಯಾತ ಒಣಮೀನ ವ್ಯಾಪಾರಿ ರುಸ್ತುಂಸ್ಯಾಬರ ಮೂರನೇ ಮಗ. ತುಳುವ ನೆಲದಲ್ಲಿ ಕೋಮುದ್ವೇಷದ ಜ್ವಾಲೆ ಎಂಬುದು ಯಾವತ್ತು ದಟ್ಟವಾಗಿ ಹತ್ತಿಕೊಂಡಿತೋ... ಆವತ್ತೇ ರುಸ್ತುಂಸ್ಯಾಬರು ತನ್ನ ಕುಟುಂಬವನ್ನು ತನ್ನ ಭಾವಮೈದುನರಿರುವ ಸಕಲೇಶಪುರಕ್ಕೆ ಕಳುಹಿಸಿಕೊಟ್ಟು, ತಾವೊಬ್ಬರೇ ಮಂಗಳೂರಿನ ಹಳೇಬಂದರಿನಲ್ಲಿ ಪುಟ್ಟ ಮನೆ ಮಾಡಿಕೊಂಡು ಹುಸೇನ್‌ಬ್ಯಾರಿಯ ತಟ್ಟಿ ಹೋಟೆಲು ಹಾಗೂ ವಿಠೋಬ ಕಾಮತರ ಚಾ–ಕಾಫಿ ಕ್ಲಬ್‌ನಲ್ಲಿ ಉಣ್ಣುತ್ತ... ಒಣಮೀನಿನ ವಾಸನೆಯಂತೆ ರುಮು ರುಮು ಹರಿದು ಬರುತ್ತಿದ್ದ ಹಣವನ್ನು ಗಟ್ಟದ ಮೇಲಿರುವ ತಮ್ಮ ಕಾಫಿತೋಟಕ್ಕೆ ಉಣಿಸತೊಡಗಿದ್ದರು.

ಕೂಳೂರಿನ ಇಗರ್ಜಿ ಶಾಲೆಯಲ್ಲಿ ಅಂದರೆ ರಾಮಯ್ಯಾಳ್ವರು ಮೇಷ್ಟ್ರಾಗಿದ್ದ ಪ್ರಾಥಮಿಕ ಶಾಲೆಯಲ್ಲಿ ಈ ರುಸ್ತುಂಸ್ಯಾಬರ ಮಗ ವಾಹೀದ್ ಏಳನೇ ತರಗತಿಯಲ್ಲಿ ಓದುತ್ತಿರಬೇಕಾದರೆ, ಈ ಸ್ವಪ್ನ ಹೆಗ್ಡೆ ಮೂರನೇ ತರಗತಿಯಲ್ಲಿದ್ದಳು. ಸ್ವಪ್ನ ಹೆಗ್ಡೆಯ ಅಜ್ಜ ದೂಮಣ್ಣ ಪರಾರಿಯವರು ರುಸ್ತುಂಸ್ಯಾಬರಿಗೆ ತುಂಬ ಹತ್ತಿರದ ಪರಿಚಯ. ಈ ಪರಾರಿಯವರ ಮುಂಬೈಯಲ್ಲಿರುವ ಹೆಣ್ಮಕ್ಕಳಿಗೆಲ್ಲ ಪ್ರತಿ ವರ್ಷವೂ ಒಣಬಂಗುಡೆ, ಬಲ್ಯಾರು ಮೀನುಗಳನ್ನು ತುಂಬು ಆಸೆಯಿಂದ ಗನಾಗಟ್ಟಿ ಪ್ಯಾಕ್ ಮಾಡಿ ಘಾಟ್ಕೆಪಾಟಿಲ್ ಬಸ್ಸಿನಲ್ಲಿ ಮುಂಬೈಗೆ ಕಳುಹಿಸುತ್ತಿದ್ದವರು ಯಾರು? ಇದೆ ರುಸ್ತುಂಸ್ಯಾಬರಲ್ವೇ. ಸ್ವಪ್ನ ಹೆಗ್ಡೆಯ ತಾಯಿ ಸುಖಲತಳಿಗಂತೂ ವರ್ಷಂಪ್ರತಿ ಒಣನಂಗು ಬಲ್ಯಾರುಬಂಗುಡೆ ಮೀನನ್ನು ಆಕೆಯ ಗಂಡ ಪೊಲೀಸ್ ಇನ್‌ಸ್ಪೆಕ್ಟರ್ ಪ್ರಸನ್ನ ಹೆಗ್ಡೆಯವರ ವಿಳಾಸಕ್ಕೆ ಕಳುಹಿಸಿಕೊಡುತ್ತಿದ್ದವರು–ಇದೇ ರುಸ್ತುಂಸ್ಯಾಬರು.

ಮನೆ ಹಿರಿಯರ ಈ ಒಣಮೀನ ವ್ಯವಹಾರದಿಂದಲೇ ಶಾಲೆಯಲ್ಲಿ ಸ್ವಪ್ನ ಮತ್ತು ವಾಹೀದ್‌ರ ಆತ್ಮೀಯವಾದ ಪರಿಚಯ ಮೆಲು ನಗುವಿನ ಮೂಲಕ ನಿರಾತಂಕವಾಗಿ ಮುಂದುವರಿದಿತ್ತು. ಆದರೆ ಬೈಕಂಪಾಡಿಯ ಕೋಮುಗಲಭೆಯ ಕಾಲದಲ್ಲಿ, ಯಾವತ್ತು ಈ ರುಸ್ತುಂಸ್ಯಾಬರನ್ನು ಆ